ನಿಜವಿದ್ದಿರಬಹುದು. ಆದರೆ, ಬೆಣ್ಣೆಯುದು ಮಾತ್ರ ಪಕ್ಕಾ ಸುಳ್ಳು. ಯಾಕೆಂದರೆ ಅಂಗಡಿಗೆ ಬೆಣ್ಣೆ ಹೋಗುತ್ತಿದ್ದುದು ನನ್ನ ಸಹಪಾಠಿಯ ಮನೆಯಿಂದ. ನಮ್ಮೂರ ದನಗಳಿಗೆ ಓದು ಬರಹ ಬಂದಿದ್ದರೆ, ತಮ್ಮ ಉತ್ಪನ್ನಕ್ಕೆ ಪರವೂರಿಗೆ ಕ್ರೆಡಿಟ್ ಕೊಡುತ್ತಿರುವ ಬೋರ್ಡುಗಳನ್ನು ಕೊಂಬಿನಲ್ಲಿ ತಿವಿದಿರುತ್ತಿದ್ದವು. ಹೋಟೆಲ್ ಬೋರ್ಡುಗಳಲ್ಲಿ ಇನ್ನೊಂದು ಕಿರಿಕಿರಿಯಿದೆ. ಅಲ್ಲಿ ಅಕ್ಷರದ ಜತೆ ಕುರಿ ಮೀನು ಕೋಳಿಗಳ ಚಿತ್ರಗಳಿರುತ್ತವೆ. ಹುಂಜದ ಮುದ್ದಾದ ಚಿತ್ರ ಬರೆದು ಅದರ ಮೇಲೆ ಪ್ರೀತಿ ಹುಟ್ಟಿಸಿ, ಬಳಿಕ ಒಳಗೆ ಬನ್ನಿ ಅದನ್ನು ಕೊಯ್ದು ಪಲ್ಯ ಮಾಡಿದ್ದೇವೆ ಎಂದು ಸ್ವಾಗತಿಸುವುದು ಯಾಕೋ ಕಷ್ಟಕೊಡುತ್ತದೆ. ಕಂಪನಿಗಳು ರಸ್ತೆಬದಿಯ ಮನೆಗಳ ಗೋಡೆಗಳ ಮೇಲೆ ದೃಢತೆ ಬಾಳಿಕೆಯ ಸಂಕೇತವೆಂದು ತಮ್ಮ ಕಬ್ಬಿಣ ಸಿಮೆಂಟುಗಳನ್ನು ಬಣ್ಣಿಸಿರುತ್ತವೆ. ಅಲ್ಲೊಬ್ಬ ಬಾಹುಬಲಿಯ ಚಿತ್ರವೂ ಇರುತ್ತದೆ. ಆದರೆ, ಬರೆಸಿಕೊಂಡ ಗೋಡೆಗಳೇ ಬಿರುಕು ಬಿಟ್ಟಿರುತ್ತವೆ. ಉತ್ತರ ಭಾರತದಲ್ಲಿ ದೊಡ್ಡ ನಗರಗಳು ಬಂದೊಡನೆ ಗೋಡೆಗಳ ಮೇಲೆ ಲೈಂಗಿಕ ರೋಗ ಗುಣಪಡಿಸುವ ವೈದ್ಯರುಗಳ ವಿಪರೀತ ಜಾಹಿರಾತುಗಳನ್ನು ನೋಡುವಾಗಲೂ, ನಾನು ವಿಚಲಿತನಾಗುತ್ತೇನೆ. ನಾನು ಕನ್ನಡ ಶಿಕ್ಷಕನಾಗಿರುವುದರಿಂದ, ಬೀದಿಸಾಹಿತ್ಯದಲ್ಲಿ ಕಾಗುಣಿತ ದೋಷ ನನಗೆ ಎದ್ದುಕಾಣುತ್ತದೆ. ಉತ್ತರ ಭಾರತದ ಬೇಲ್‌ಪುರಿ ಗಾಡಿಯವರ ಕನ್ನಡವಂತೂ ಹೇಳಬಾರದು. ಅವರು ವ್ಯಂಜ್ಯನಗಳಿಗೆ ಮಾತ್ರವಲ್ಲ, ಸ್ವರಗಳಿಗೂ ಒತ್ತಕ್ಷರ ಕೊಡಬಲ್ಲರು. ಆಂಗ್ಲ ಸೂಚನೆಗಳನ್ನು ಕಂಪ್ಯೂಟರಿನಲ್ಲಿ ಅನುವಾದ ಮಾಡಿಸಿ ಹಾಕುತ್ತಿರುವ ಕಡೆಯಲ್ಲೂ ಇದೇ ಸಮಸ್ಯೆ ಒಂದೆಡೆ 'ಡೋಂಟ್ ಪಾಸ್ ಯೂರಿನ್ ಹಿಯರ್' ಎನ್ನುವುದನ್ನು ಕಂಪ್ಯೂಟರ್ "ಇಲ್ಲಿ ಮೂತ್ರ ಉತ್ತೀರ್ಣ ಮಾಡಬೇಡಿ" ಎಂದು ಅನುವಾದಿಸಿತ್ತು. ಒಂದು ಊರಿನ ಫಲಾನೆ ಸಂಘಟನೆಯವರು ಗೋಡೆಯ ಮೇಲೆ ಹೀಗೆ ಬರೆದಿದ್ದರು: "... ಸಂಘಟನೆ ಸೇರಿರಿ, ಹೊಸನಾಡ ಕಟ್ಟಿರಿ". ಹಾಗೆ ಕಂಡರೆ, ಬೋರ್ಡುಸಾಹಿತ್ಯ ಗೋಡೆಸಾಹಿತ್ಯದಲ್ಲಿ ವ್ಯಾಕರಣ ದೋಷ ಹುಡುಕಬಾರದು. ಪ್ರೇಮಿಗಳ ಬರಹದಲ್ಲಂತೂ ದೋಷ ಹುಡುಕುವುದು ಸರ್ವಥಾ ಸಲ್ಲದು. ಪ್ರೇಮಕ್ಕೆ ಭಾಷೆಯ ಹಂಗಿಲ್ಲ. ಭಾವ ಮುಖ್ಯ. ರೂಪವಲ್ಲ. ಪ್ರಾಚೀನ ಕಟ್ಟಡಗಳ ಗೋಡೆಯ ಗಾರೆಯನ್ನೊ, ಮರದ ತೊಗಟೆಯನ್ನೊ ಕೆತ್ತಿ ಪ್ರೇಮಿಗಳು ರಚಿಸಿದ ಶಾಸನಗಳನ್ನು ಗಮನಿಸಬೇಕು. ಅವನ್ನು ಬರೆಯಲಾದ ಅಥವಾ ಕೆತ್ತಲಾದ ಜಾಗ ನೋಡಿದರೆ, ಅಷ್ಟು ಎತ್ತರಕ್ಕೆ ಹೇಗಾದರೂ ಹತ್ತಿದರಪ್ಪಾ ಎಂದು ಆಶ್ಚರ್ಯವಾಗುವುದು. ಪ್ರೇಮಕ್ಕಾಗಿ ಪ್ರಾಣಕೊಡಲು ಸಿದ್ಧ ಎಂಬ ಸಂದೇಶವೂ ಅಲ್ಲಿರುತ್ತದೆ. ಗೋಲಗುಂಬಜವು ಇಂತಹ ಅಮರಪ್ರೇಮಿಗಳ ಕೆತ್ತನೆಗಳಿಂದ ತುಂಬಿಹೋಗಿದೆ. ಬದಾಮಿಯ ಗುಹೆಗಳಿರುವ ಬೆಟ್ಟದಲ್ಲಿ ಒಂದೆಡೆ ಬಂಡೆಯ ಛಾವಣಿಯಲ್ಲಿ ಜೇನು ಗೂಡನ್ನು ಕಟ್ಟಲು ಅಂಜುವ ಕಡೆಯಲ್ಲೂ ಒಬ್ಬ ಹೋಗಿ, ಪೈಂಟಿನಲ್ಲಿ ತನ್ನ ಪ್ರಿಯತಮೆಯ ಹೆಸರನ್ನು ಬರೆದಿದ್ದನು. ಪ್ರಿಯಕರನಿಗಾಗಿ ಜಾತಿ-ಧರ್ಮ ಬಿಟ್ಟು ಬರಲು ಸಿದ್ಧವಿರುವ ಹುಡುಗಿಯರು, ತಮ್ಮ ಪ್ರೇಮವನ್ನು ತೋರಿಸಿಕೊಳ್ಳುವುದಕ್ಕೆ ಈ ಮಾರ್ಗ ಅನುಸರಿಸುವುದಿಲ್ಲ.

ಬೋರ್ಡು ಮತ್ತು ವಾಹನ ಸಾಹಿತ್ಯದಲ್ಲಿ ಬರೆದವರು ಜವಾಬ್ದಾರಿ ಹೊರುತ್ತಾರೆ. ಆದರೆ, ಗೋಡೆ ಸಾಹಿತಿಗಳು ಅನಾಮಧೇಯರು. ಅಲ್ಲಿ ಒಬ್ಬರು ಬರೆದ ಸಾಹಿತ್ಯಕ್ಕೆ ಓದುಗರ ಪ್ರತಿಕ್ರಿಯೆಯೂ ದಾಖಲಾಗುತ್ತದೆ. ಆ ಪ್ರತಿಕ್ರಿಯೆಯ ಕೆಳಗೆ ಮತ್ತೊಬ್ಬನ ವಿಮರ್ಶೆ ಇರುತ್ತದೆ. ಇದು ಒಂದೇ ಕಚೇರಿಯ ವಿಭಿನ್ನ ಹಂತದ ಗುಮಾಸ್ತರು, ಅಧಿಕಾರಿಗಳು ಟಿಪ್ಪಣಿ ಬರೆದ ಸರ್ಕಾರಿ ಕಡತವಾಗಿರುತ್ತದೆ. ಈ ಸಾಹಿತ್ಯದ ಬಗ್ಗೆ ನಮ್ಮಲ್ಲೊಬ್ಬರು ಗಂಭೀರ ಅಧ್ಯಯನ ಮಾಡಿದರು. ಅವರಿಗೆ ಡಾಕ್ಟರೇಟ್ ಪದವಿ ಸಿಕ್ಕಿತು. ಜತೆಗೆ ಟಾಯ್ಲೆಟ್ ಸಾಹಿತಿ ಎಂಬ ಬಿರುದನ್ನೂ ಹೊರಬೇಕಾಯಿತು. ಶೌಚಾಲಯ ಸಾಹಿತ್ಯವು ಲೈಂಗಿಕತೆ ಬಗ್ಗೆ ಅನಗತ್ಯವಾದ ನಿಗೂಢತೆ ನಿಷೇಧ ಸೃಷ್ಟಿಸಿ ಮುಚ್ಚಿಟ್ಟದ್ದರ ಪರಿಣಾಮ; ಇದು ಸಮಾಜದಲ್ಲಿ ಯುವಜನರ ಸುಪ್ತ ಮನೋಲೋಕದೊಳಗಿರುವ ಕೋಲಾಹಲವನ್ನು ಬಿಂಬಿಸುತ್ತಿದೆ. ಅವರಿಗೆ ಜರೂರಾಗಿ ಲೈಂಗಿಕ ಶಿಕ್ಷಣದ ಅಗತ್ಯವಿದೆ ಎಂದು ಅವರು ಸಿದ್ಧಾಂತ ಮಾಡಿದರು. ಯಾರೂ ಅದನ್ನು ಲೆಕ್ಕಿಸಲಿಲ್ಲ. ನಿಜ. ಹೊರಗೋಡೆ-ಒಳಗೋಡೆ ಸಾಹಿತ್ಯವು ಸದರಿ ದೇಶ ಸಾಗುತ್ತಿರುವ ದಿಕ್ಕನ್ನೂ ಸಮಾಜದೊಳಗಿನ